ತಹಶೀಲ್ದಾರ್‌ರುಗಳ ಸೇವೆ ಹಾಗೂ ವರ್ಗಾವಣೆ ನೀತಿ

982(2018); ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)

ಅ) ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎನ್.ಆರ್.ಪುರ ತಾಲ್ಲೂಕಿನ ತಹಶೀಲ್ದಾರ್ ಹಾಲಿ ಸ್ಥಳದಲ್ಲಿ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಸದರಿ ಕಛೇರಿಯಲ್ಲಿ ವಿವಿಧ ಹುದ್ದೆಗಳಲ್ಲಿ ಎಷ್ಟು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ (ಹುದ್ದೆವಾರು ಕರ್ತವ್ಯ ನಿರ್ವಹಿಸಿರುವ ಅವಧಿಯ ವಿವರ ನೀಡುವುದು);

ಆ) ಕಳೆದ ಮೂರು ವರ್ಷಗಳಿಂದ ಇವರನ್ನು ಎಷ್ಟು ಬಾರಿ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿತ್ತು (ವರ್ಗಾವಣೆ ಆದೇಶಗಳ ಪ್ರತಿ ಒದಗಿಸುವುದು);

ಇ) ಕಳೆದ ಇಪ್ಪತ್ತು ಮೂರು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಇವರ ವಿರುದ್ಧ ದೂರುಗಳು ಇರುವ ಕಾರಣ ಇವರನ್ನು ವರ್ಗಾವಣೆ ಮಾಡಲಾಗಿದೆ ಎಂದು ಹಿಂದಿನ ವರ್ಗಾವಣೆ ಆದೇಶದಲ್ಲಿ ಉಲ್ಲೇಖಿಸಿರುವುದು ನಿಜವೇ; ಹಾಗಿದ್ದಲ್ಲಿ, ಪುನ: ಇವರ ವರ್ಗಾವಣೆ ಆದೇಶವನ್ನು ರದ್ದುಪಡಿಸಲು ಕಾರಣವೇನು;

ಈ) ಸರ್ಕಾರ ವಿವಿಧ ವೃಂದದ ನೌಕರರು ಒಂದೇ ಸ್ಥಳದಲ್ಲಿ ಎಷ್ಟು ವರ್ಷಗಳ ಕಾಲ ಸೇವೆ ಸಲ್ಲಿಸಲು ನಿಯಮಾವಳಿ ಪ್ರಕಾರ ಅವಕಾಶ ಕಲ್ಪಿಸಲಾಗಿದೆ (ವೃಂದವಾರು ವಿವರ ನೀಡುವುದು)?

ಶ್ರೀ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಶ್ರೀ ತಿಮ್ಮಪ್ಪ, ತಹಶೀಲ್ದಾರ್ ಗ್ರೇಡ್–2, ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಜಿಲ್ಲೆ ಇವರನ್ನು ಚುನಾವಣೆಯ ಸಂದರ್ಭದಲ್ಲಿ ತಹಶೀಲ್ದಾರ್ ಗ್ರೇಡ್–1 ಹುದ್ದೆಯಲ್ಲಿ

ತಾತ್ಕಾಲಿಕವಾಗಿ ಹಾಗೂ ಚುನಾವಣೆ ಮುಗಿಯುವವರೆಗೆ ದಿನಾಂಕ: 25–5–2015 ರಂದು ನೇಮಿಸಲಾಗಿರುತ್ತದೆ.

ಶ್ರೀ ಎಂ. ಲೋಕೇಶಪ್ಪ, ತಹಶೀಲ್ದಾರ್ ಗ್ರೇಡ್–1 ಇವರು ವಿವಿಧ ವೃಂದಗಳಲ್ಲಿರುವಾಗ ಎನ್.ಆರ್.ಪುರ ತಾಲ್ಲೂಕು ಕಛೇರಿಯಲ್ಲಿ ಈ ಕೆಳಕಂಡ ಅವಧಿಗಳಲ್ಲಿ ಕಾರ್ಯನಿರ್ವಹಿಸಿರುತ್ತದೆ.

ಹುದ್ದೆ	ಅವಧಿ
ಪ್ರ.ದ.ಸ	ದಿ: 18–6–1998 ರಿಂದ 28–11–1994
ಶಿರಸ್ತೇದಾರ್	ದಿ: 30–1–1994 ರಿಂದ 07–6–2005 ರವರೆಗೆ ಹಾಗೂ 20–8–2005 ರಿಂದ 31–12–20
ತಹಶೀಲ್ದಾರ್ ಗ್ರೇಡ್–2	ದಿ: 1–1–2013 ರಿಂದ 31–10–2014
ತಹಶೀಲ್ದಾರ್ ಗ್ರೇಡ್–1	ದಿ: 1–11–2014 ರಿಂದ 24–5–2015

ಆ) ಕಳೆದ ಮೂರು ವರ್ಷಗಳಿಂದ ಶ್ರೀ ಎಂ. ಲೋಕೇಶಪ್ಪ ಇವರನ್ನು ಮೂರು ಬಾರಿ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ (ಆದೇಶದ ಪ್ರತಿಗಳನ್ನು ಲಗತ್ತಿಸಿದೆ)

ಇ) ಶ್ರೀ ಎಸ್.ಎಂ. ಲೋಕೇಶಪ್ಪ ಇವರು ಒಂದೇ ಸ್ಥಳದಲ್ಲಿ 23 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆಂಬ ದೂರಿನ ಮೇಲೆ ಅವರನ್ನು ಅಧಿಸೂಚನೆ ಸಂಖ್ಯೆ: ಕಂಇ 7 ಎಟಿಎಸ್ 2015 ದಿನಾಂಕ: 2–3–2015 ರಲ್ಲಿ ತಹಶೀಲ್ದಾರ್, ಎನ್.ಆರ್.ಪುರ ತಾಲ್ಲೂಕು ಹುದ್ದೆಯಿಂದ ವರ್ಗಾಯಿಸಿ ತಹಶೀಲ್ದಾರ್, ಯು.ಪಿ.ಓ.ಆರ್, ಮೈಸೂರು ಹುದ್ದೆಗೆ ನೇಮಿಸಲಾಗಿತ್ತು.

ಆದರೆ, ಎನ್.ಆರ್.ಪುರ ತಾಲ್ಲೂಕು ತಹಶೀಲ್ದಾರ್ ಹುದ್ದೆಗೆ ಬೇರೊಬ್ಬ ಅಧಿಕಾರಿಯವರನ್ನು ನೇಮಿಸದ ಕಾರಣದಿಂದಾಗಿ ಶ್ರೀ ಎಸ್.ಎಂ. ಲೋಕೇಶಪ್ಪ ಇವರು ಸದರಿ ಹುದ್ದೆಯಲ್ಲಿಯೇ ಮುಂದುವರೆದಿದ್ದು,

ರಾಜ್ಯದ ಗ್ರಾಮ ಪಂಚಾಯಿತಿಗಳ ಚುನಾವಣೆಗಳ ಸಂಬಂಧದಲ್ಲಿ ಸದರಿ ಅಧಿಕಾರಿಯವರನ್ನು ದಿನಾಂಕ: 13–5–2015 ರ ಆದೇಶದಲ್ಲಿ ಮುಂದುವರೆಸಲಾಗಿತ್ತು.

ಸದರಿ ಅಧಿಕಾರಿಯವರು ಚುನಾವಣೆಗೆ ಸಂಬಂಧಿಸಿದಂತೆ ಅಕ್ರಮ ಕಾರ್ಯ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾರೆಂದು ದೂರುದಾರರ ಅರ್ಜಿಯನ್ನು ಪರಿಶೀಲಿಸಿದ ರಾಜ್ಯ ಚುನಾವಣಾ ಆಯೋಗವು ದಿನಾಂಕ: 20–5–2015 ರಲ್ಲಿ ನೀಡಿರುವ ಸೂಚನೆಯನ್ವಯ ಅವರನ್ನು ಅಧಿಸೂಚನೆ ಸಂಖ್ಯೆ: ಕಂಇ 221 ಎಎಸ್‌ಡಿ 2015(1) ದಿನಾಂಕ: 22–5–2015 ರಲ್ಲಿ ತಹಶೀಲ್ದಾರ್, ಯು.ಪಿ.ಓ.ಆರ್, ಮೈಸೂರು ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಆದೇಶ ನೀಡಲಾಗಿರುತ್ತದೆ.

ಈ) 2015 ರ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿಯಲ್ಲಿ ಸಿ–ವೃಂದದ ನೌಕರರು ಒಂದೇ ಸ್ಥಳದಲ್ಲಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಲು ಹಾಗೂ ಎ & ಬಿ ವೃಂದದ ಅಧಿಕಾರಿಗಳಿಗೆ 3 ವರ್ಷಗಳ ಗರಿಷ್ಟ ಸೇವೆ ಸಲ್ಲಿಸಲು ಅವಧಿ ಕಲ್ಪಿಸಲಾಗಿದೆ.

GOVERNMENT OF KARNATAKA

No. RD 151 ASD 2014

Karnataka Government Secretariat,
MS Building,
Bangalore, dated : 25-3-2014

NOTIFICATION

The following Tahsildars Grade-1 (Rule-32/officiating) and Karnataka Government Secretariat officers are transferred and posted against their names in the public interest and the instructions of Election Commission of India-vide its No. 437/6/1/2014-CC&BE dated 9-1-2014 and in confirmation with the approval of the Chief Electoral Officer and Ex-officio Principal Secretary to Government, DPAR (Elections) in his letter No. DPAR 52 CHUSIA 2014 Dt.25-3-2014 in connection with the Loksabha election-2014. The Officers transferred against their names should report within 24 hours In respect of transferred officers who have not reported for the duty, the concerned Deputy Commissioners should ascertain and report to the Government immediately. The officers who have not reported for the duty deemed to have been suspended with immediate effect

Sl.No.	Name of officer & designation (Sri/Smt)	Place of posting
1	Reshma Hanagal, Tahsildar Gr-1, Jagalur Taluk, Davanagere Dist	Election Tahsildar, DC office, Davanagere-in place of Geetha B.Javalekar
2	Geetha B.Javalekar Tahsildar Gr-1, Election Tahsildar, DC office, Davanagere	Tahsildar Gr 1, Jagalur Taluk, Davanagere Dist-in place of Reshma Hanagal

Sl.No.	Name of officer & designation (Sri/Smt)	Place of posting
50	Smt. C Bharathi, Tahsildar Gr-2, AC office, Bangalore (south) taluk (under orders of posting as Tahsildar Grade-I (R-32), Tahsildar Gr-1, Office Assistant to DC office, Bangalore Urban Dist)	Tahsildar, BBMP, Bangalore -in place of Mahesh chandra
51	Preetham Naslapura, Tahsildar Grade-1 Belgaum taluk, Belgaum Dist	Tahsildar Grade-1 RC office, Belgaum-vacant place
52	IN Chandraiah Tahsildar Grade-2, Madhugiri Taluk, Tumkur Dist. (under orders of posting as Tahsildar Grade-I (R-32), Election Tahsildar, DC office, Chikkaballapur)	Tahsildar Grade-I Belgaum taluk Belgaum Dist-vacant place
53	Manjunath R.Bellary, Tahsildar Grade-1 Davanagere taluk, Davanagere Dist. (orders of posting to Tahsildar Grade I, Moodigere taluk Chikkamagalur Dist-on transfer)	Continued as Tahsildar Grade-I Davanagere taluk Davanagere Dist
54	Shivarangappa, Tahsildar Grade-I Moodigere taluk, Chikkamagalur Dist (orders of posting to Tahsildar Grade-I, Davanagere taluk Davanagere Dist-on transfer)	Municipal Tahsildar DC office, Chikkamagalur-in place of NK Sharadamba
55	NK Sharadamba, Tahsildar Gr-1, Alur taluk, Hassan Dist. (under posting to the post of Municipal Tahsildar, DC office, Chikkamagalur on transfer)	Tahsildar Grade-I Moodigere taluk Chikkamagalur Dist-in place of Shivarangappa
56	K Maheshchandra Tahsildar, BBMP, Bangalore-continued in the same post as Tahsildar Gr 1, R-32	Tahsildar Grade-I Madikeri taluk Kodagu Dist-in place of Kunjamma
57	SM Lokeshappa Tahsildar Grade-2, NR Pura taluk, Chikkamagalur Dist. (under orders of posting as Tahsildar Grade-I (R-32), Tahsildar Grade-1, Kumta Taluk, UK Dist)	Vice Principal, DTI, Shimoga-in place of PN Puttashetty

Sl.No.	Name of officer & designation (Srl/Smt)	Place of posting
79	Prakash M Nashi, Dy. Tahsildar, Nada Kacheri, Chabbi, Hubli Taluk, Dharwad Dist (under orders of posting as Tahsildar Grade-2 (R-32), Tahsildar Gr-2, Hubli taluk, Dharwad Dist)	Tahsildar Grade-2, Navalgund taluk, Dharwad Dist-vacant place
80	K Subbarao Shirestedar Taluk office, Surpur taluk Yadgiri Dist (under orders of posting as Tahsildar Grade-2 (R-32), Municipal Tahsildar, DC office, Raichur Dist)	Tahsildar Grade-2 AC office, Raichur sub division, Raichur -vacant place
81	Geetha M.Kembhavi (Honakeri) Shirestedar, DTI, Dharwad (under orders of posting as Tahsildar Grade-2 (R-32), Tahsildar, SLAO office, National Highway, Dharwad)	Tahsildar Grade-2 Municipal Tahsildar, DC office, Dharwad Dist-vacant place
82	N Raghumurthy Tahsildar Gr-2, DSSP, Bangalore (under orders of posting as Tahsildar Grade-2 (R-32), Tahsildar Gr-2 Devanahalli Taluk, Bangalore Dist.)	Continued as Tahsildar Grade-2 DSSP, Bangalore.

- Deputy Commissioners are directed not to assign election related works to the Tahsildar Grade-2 officers who are working in the native District/completed 3 years of service in the same District.

- Officers who are posted/transferred vide Notification No. RD 894 ASD 2013(1), RD 894 ASD 2013(2), RD 894 ASD 2013(3), RD 23 ASD 2013 dt. 4-3-2014 with the above modifications, are relieved from the post held by them with immediate effect.

By Order and in the name of the
Governor of Karnataka,

(K.S. SAROJAMMA) 25/3
Deputy Secretary to Government,
Revenue Department (Services-3).

To

(1) The Accoutant General (A&E), Karnataka, Bangalore

ಕರ್ನಾಟಕ ಸರ್ಕಾರ

ಸಂಖ್ಯೆ ಆರ್‌ಡಿ 07 ಎಡಿಎಸ್ 2015 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 02-03-2015.

ಅಧಿಸೂಚನೆ

ಕಂದಾಯ ಇಲಾಖೆಯ ತಹಶೀಲ್ದಾರ್ ಗ್ರೇಡ್-I ಹಾಗೂ ಗ್ರೇಡ್-II ವೃಂದದ ಈ ಕೆಳಕಂಡ ಅಧಿಕಾರಿಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳಕ್ಕೆ ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ.

ಕ್ರ.ಸಂ	ಅಧಿಕಾರಿಯ ಹೆಸರು, ಹುದ್ದೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೇಣಿ / ಶ್ರೇಣಿಯಿಂದ	ವರ್ಗಾಯಿಸಿ ನೇಮಿಸಬೇಕಾದ ಸ್ಥಳ
1	ಎಸ್. ಎಂ. ಯೋಗೇಶಪ್ಪ, ತಹಶೀಲ್ದಾರ್ ಗ್ರೇಡ್-I ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ವರ್ಗಾವಣೆಯಿಂದ ಖಾಲಿಯಾದ ಸ್ಥಳಕ್ಕೆ ಕಾರ್ಯನಿರ್ವಹಿಸುತ್ತಿರುವುದಾಗಿ ದೂರು)	ತಹಶೀಲ್ದಾರ್ ಗ್ರೇಡ್-I ಯು.ಪಿ.ಆರ್ ಮೈಸೂರು. (ಖಾಲಿ ಹುದ್ದೆಗೆ)
2	ಗಾಳಿ ಕೊಟ್ರೇಶ್ವರ ಘೋರಸಭಾ ತಹಶೀಲ್ದಾರ್ ಗದಗ ಜಿಲ್ಲಾಧಿಕಾರಿಗಳ ಕಛೇರಿ, ಗದಗ.	ತಹಶೀಲ್ದಾರ್ ಗ್ರೇಡ್-I ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ.
3	ಪ್ರಮೋದ್ ತಹಶೀಲ್ದಾರ್ ಗ್ರೇಡ್-I ಮೊಳಕಾಲ್ಮೂರು ತಾಲ್ಲೂಕು	ತಹಶೀಲ್ದಾರ್ ಗ್ರೇಡ್-I ಬಳ್ಳಾರಿ ತಾಲ್ಲೂಕು, ಬಳ್ಳಾರಿ
4	ವಿಶ್ವಜೀತ್ ಮೆಹತ, ತಹಶೀಲ್ದಾರ್ ಗ್ರೇಡ್-I ಬಳ್ಳಾರಿ ತಾಲ್ಲೂಕು	ತಹಶೀಲ್ದಾರ್ ಗ್ರೇಡ್-I ಬೀಳ್ಕಿ ತಾಲ್ಲೂಕು ಬೀದರ್
5	ಶಿವಶರಣಪ್ಪ ಕಛೇರೆಳ, ವಿಶೇಷ ತಹಶೀಲ್ದಾರ್ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ	ತಹಶೀಲ್ದಾರ್ ಗ್ರೇಡ್-I ಶಹಾಪುರ ತಾಲ್ಲೂಕು

ಇತಿ 2/3/2015

6	ಮುರಳಿಧರ ಹೆಗ್ಗಡೆ ತಹಶೀಲ್ದಾರ್‌ಶೀಲ್ದಾರ್ ಗ್ರೇಡ್-II ವಿಶೇಷ ತಹಶೀಲ್ದಾರ್‌ಶೀಲ್ದಾರ್, ಕಡಬ ಮುತ್ತೂರು ತಾಲ್ಲೂಕು	ತಹಶೀಲ್ದಾರ್ ಗ್ರೇಡ್-II ಭಂಟ್ವಾಳ ತಾಲ್ಲೂಕು. ದಕ್ಷಿಣ ಕನ್ನಡ
7	ಅಂಗಯ್ಯ. ತಹಶೀಲ್ದಾರ್ ಗ್ರೇಡ್-II ಬೆಳ್ತಂಗಡಿ	ವಿಶೇಷ ತಹಶೀಲ್ದಾರ್. ಕಡಬ, ಮುತ್ತೂರು ತಾಲ್ಲೂಕು. ದಕ್ಷಿಣ ಕನ್ನಡ
8	ಸುಬ್ಬಣ್ಣ ಮಲ್ಲಪ್ಪ ತಹಶೀಲ್ದಾರ್ ಗ್ರೇಡ್-II ವಿಶೇಷ ತಹಶೀಲ್ದಾರ್, ಗುಲ್ಬರ್ಗಾ (ಉತ್ತರ) ಕಮಲಾಪುರ	ವಿಶೇಷ ತಹಶೀಲ್ದಾರ್, ವಡಗೇರಾ, ಯಾದಗಿರಿ ಜಿಲ್ಲೆ (ಖಾಲಿ ಹುದ್ದೆ)
9	ಹೆಚ್.ಟಿ. ಪಾರ್ಥಸಾರಥಿ, ತಹಶೀಲ್ದಾರ್ ಗ್ರೇಡ್-II ಶೃಂಗೇರಿ ತಾಲ್ಲೂಕು ಕಛೇರಿ	ತಹಶೀಲ್ದಾರ್ ಗ್ರೇಡ್-II ಬೇಲೂರು ತಾಲ್ಲೂಕು, ಹಾಸನ-ಜಿಲ್ಲೆ
10	ಶ್ರೀ ಮಲ್ಲಿಕಾರ್ಜುನ ಎಸ್. ಹಲಕುರ್ಕಿ, ಶಾಖಾಧಿಕಾರಿ, ನಗರಾಭಿವೃದ್ಧಿ ಇಲಾಖೆ (ಕರ್ನಾಟಕ ಸರ್ಕಾರದ ಸಚಿವಾಲಯ)	ತಹಶೀಲ್ದಾರ್ ಗ್ರೇಡ್-I ವಿಜಯಪುರ ಇಲ್ಲಿನ ಖಾಲಿ ಹುದ್ದೆ
11	ಶೈಲಜಾ ಎಂ.ಎಸ್. ತಹಶೀಲ್ದಾರ್ ಗ್ರೇಡ್-II ಕಾರವಾರ ತಾಲ್ಲೂಕು	ತಹಶೀಲ್ದಾರ್ ಗ್ರೇಡ್-II ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.

ಕರ್ನಾಟಕ ರಾಜ್ಯ ವಾಪರೆ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಯಲಕ್ಷ್ಮಿ 2/3/2015

ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಇವರಿಗೆ,

1 ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ ಬೆಂಗಳೂರು
2 ಎಲ್ಲಾ ಪ್ರಾದೇಶಿಕ ಆಯುಕ್ತರು. ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ,
3 ಎಲ್ಲಾ ಭೂಮ್ಲಾಧಿಕಾರಿಗಳು,
4 ಮಾನ್ಯ ಕಂಪಾಯ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5 ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ

6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ.
8. ಸಂಬಂಧಿಸಿದ ಅಧಿಕಾರಿಗಳಿಗೆ.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 221 ಎಎಸ್‌ಡಿ 2015(1) ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:22.05.2015

ಅಧಿಸೂಚನೆ

ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳಿಗೆ 2015ರ ಸಾರ್ವತ್ರಿಕ ಚುನಾವಣೆಯನ್ನು ನಡೆಸಲು ರಾಜ್ಯ ಚುನಾವಣಾ ಆಯೋಗವು ಚುನಾವಣಾ ವೇಳಾ ಪಟ್ಟಿಯನ್ನು ದಿನಾಂಕ: 05.05.2015ರಂದು ಪ್ರಕಟಿಸಿ, ಚುನಾವಣಾ ಪ್ರಕ್ರಿಯೆಯು ದಿನಾಂಕ: 10.05.2015 ರಿಂದ ಪ್ರಾರಂಭವಾಗಿ ದಿನಾಂಕ: 07.06.2015 ರಂದು ಮುಕ್ತಾಯವಾಗುವುದರಿಂದ, ಸ್ವಂತ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಹಶೀಲ್ದಾರ್ ಗ್ರೇಡ್–1 ಅಧಿಕಾರಿಗಳನ್ನು ಚುನಾವಣಾ ಮುಕ್ತಾಯವಾಗುವವರೆಗೆ ಪಕ್ಕದ ತಾಲ್ಲೂಕಿಗೆ ವರ್ಗಾವಣೆ ಮಾಡುವಂತೆ ಆಯೋಗವು ಸಂಖ್ಯೆ: ರಾಚುಆ/34/ಇಜಿಪಿ/2015 ದಿ:13.03.2015 ಹಾಗೂ ಸಂಖ್ಯೆ: ರಾಚುಆ/34/ಇಜಿಪಿ/2015 ದಿನಾಂಕ:06.05.2015ರ ಪತ್ರಗಳ ಮೂಲಕ ನಿರ್ದೇಶನ ನೀಡಿರುತ್ತದೆ.

ಅಧಿಸೂಚನೆ ಸಂಖ್ಯೆ: ಕಂಇ 07 ಎಟಿಎಸ್ 2015 ದಿನಾಂಕ:02.03.2015 ರಲ್ಲಿ ಶ್ರೀ ಎಸ್.ಎಂ. ಲೋಕೇಶಪ್ಪ ತಹಶೀಲ್ದಾರ್ ಗ್ರೇಡ್–1, ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರನ್ನು ತಹಶೀಲ್ದಾರ್ ಗ್ರೇಡ್–1 ಯು.ಪಿ.ಒ.ಆರ್. ಮೈಸೂರು ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದ್ದು, ಆದರೆ ಸದರಿ ಅಧಿಕಾರಿಯವರು ಬಿಡುಗಡೆ ಹೊಂದದೆ ಎನ್.ಆರ್.ಪುರ ತಾಲ್ಲೂಕಿನ ತಹಶೀಲ್ದಾರ್‌ರಾಗಿಯೇ ಮುಂದುವರೆದಿದ್ದರಿಂದ ರಾಜ್ಯದ ಗ್ರಾಮ ಪಂಚಾಯತಿಗಳ ಚುನಾವಣೆಯ ಸಂಬಂದದಲ್ಲಿ ಅಧಿಸೂಚನೆ

ಸಂ: ಕಂಇ 221 ಎಎಸ್‌ಡಿ 2015(ಭಾಗ) ದಿ:13.05.2015ರ ಆದೇಶದಲ್ಲಿ ಎನ್.ಆರ್.ಪುರ ತಾಲ್ಲೂಕಿನ ತಹಶೀಲ್ದಾರ್‌ರಾಗಿಯೇ ಮುಂದುವರೆಸಲಾಗಿತ್ತು.

ರಾಜ್ಯ ಚುನಾವಣಾ ಆಯೋಗವು ಪತ್ರ ಸಂಖ್ಯೆ: ರಾಚುಆ/34/ ಇಜಿಪಿ/2015 ದಿ:20.05.2015ರಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಅಕ್ರಮ ಕಾರ್ಯ ಚಟುವಟಿಕೆಯಲ್ಲಿ ಭಾಗಿಯಾಗಿರುವುದು ದೂರುದಾರರ ಅರ್ಜಿಯಲ್ಲಿ ಅಪಾಧಿಸಿರುವ ಅಂಶಗಳು ಮೇಲ್ನೋಟಕ್ಕೆ ಸತ್ಯವೆಂದು ಕಂಡು ಬಂದಿರುವುದರಿಂದ, ಶ್ರೀ ಎಸ್.ಎಂ. ಲೋಕೇಶಪ್ಪ, ತಹಶೀಲ್ದಾರ್ ಗ್ರೇಡ್–1, ಎನ್.ಪುರ.ತಾಲ್ಲೂಕು, ಇವರನ್ನು ತಕ್ಷಣ ವರ್ಗಾಯಿಸುವಂತೆ ನಿರ್ದೇಶನ ನೀಡಿರುವ ಮೇರೆಗೆ ಸದರಿ ಅಧಿಕಾರಿಯವರನ್ನು ದಿನಾಂಕ:02.03.2015ರ ವರ್ಗಾವಣೆ ಅಧಿಸೂಚನೆಯಲ್ಲಿ ನೇಮಿಸಿರುವ ತಹಶೀಲ್ದಾರ್ ಗ್ರೇಡ್–1 ಯು.ಪಿ.ಒ.ಆರ್. ಮೈಸೂರು, ಹುದ್ದೆಯಲ್ಲಿ ತಕ್ಷಣವೇ ಕರ್ತವ್ಯಕ್ಕೆ ಹಾಜರಾಗುವಂತೆ ಆದೇಶಿಸಿದೆ.

ಭಾಗ–2

ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳಿಗೆ 2015ರ ಸಾರ್ವತ್ರಿಕ ಚುನಾವಣೆಯ ಕಾರ್ಯ ನಿರ್ವಹಣೆಗಾಗಿ ಶ್ರೀ ತಿಮ್ಮಪ್ಪ, ತಹಶೀಲ್ದಾರ್ ಗ್ರೇಡ್–2, ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಜಿಲ್ಲೆ ಇವರನ್ನು ತಹಶೀಲ್ದಾರ್ ಗ್ರೇಡ್–1, ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಹುದ್ದೆಗೆ – ಶ್ರೀ ಎಸ್.ಎಂ. ಲೋಕೇಶಪ್ಪ, ಇವರ ವರ್ಗಾವಣೆಯಿಂದ ತೆರವಾಗಿರುವ ಸ್ಥಾನದಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ಚುನಾವಣೆ ಮುಕ್ತಾಯವಾಗುವವರೆಗೆ ವರ್ಗಾಯಿಸಿ ನೇಮಿಸಿದೆ. ಶ್ರೀ ತಿಮ್ಮಪ್ಪ, ತಹಶೀಲ್ದಾರ್ ಇವರು ಚುನಾವಣಾ ನೀತಿ ಸಂಹಿತೆ ಮುಕ್ತಾಯವಾದ ತಕ್ಷಣ ಈ ಹಿಂದೆ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ. ಶ್ರೀಪಾದರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇ–3 ಮತ್ತು ವಿ.ನಿ)

ಇವರಿಗೆ

(1) ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
(2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ ಅಪರ ಮುಖ್ಯ ಕಾರ್ಯದರ್ಶಿಗಳು.
(3) ರಾಜ್ಯ ಚುನಾವಣಾ ಆಯುಕ್ತರು, ಚುನಾವಣಾ ಆಯೋಗ, ಕೆ.ಎಸ್.ಸಿ.ಎಂ.ಎಫ್. ಬಿಲ್ಡಿಂಗ್, ನಂ8, 1ನೇ ಮಹಡಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–52
(4) ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ವಿ.ನಿ) ಬೆಂಗಳೂರು.
(5) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
(6) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
(7) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಮೈಸೂರು ವಿಭಾಗ
(8) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು/ಶಿವಮೊಗ್ಗ ಜಿಲ್ಲೆ.
(9) ಸಂಬಂಧಪಟ್ಟ ಅಧಿಕಾರಿಗಳು
(10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು